MKN(P)02

Sl.No. :

Total No. of Pages : 3

ಪ್ರಥಮ ವರ್ಷದ ಎಂ.ಎ. ಪದವಿ ಪರೀಕ್ಷೆ, ಮೇ - 2026
(SLM Scheme, Non-CBCS)
ಕನ್ನಡ
ಕೋರ್ಸ್–II : ಮಧ್ಯಕಾಲೀನ ಕನ್ನಡ ಸಾಹಿತ್ಯ

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ವಿಭಾಗಗಳಿಗೂ ಉತ್ತರಿಸಿ.*

ವಿಭಾಗ–ಎ

ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ. **[1×5=5]**

ಪ್ರ1) ಸಂಸಾರವೆಂಬ ಹಗೆಯಯ್ಯಾ ಎನ್ನ ತಂದೆ
ಎನ್ನ ವಂಶ ವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯಾ
ಎನ್ನುವನರಸಿ ಹಿಡಿದು ಕೊಲ್ಲುತ್ತಿದೆಯಯ್ಯ
ನಿನ್ನ ನಾ ಮರೆಹೊಕ್ಕೆ ಕಾಯಯ್ಯಾ
ಎನ್ನ ಭಿನ್ನಪವನ ಧರಿಸೂ.....

ಪ್ರ2) ದ್ಯುಮಣಿ ಕರ್ಣದ್ಯುಮಣಿ ಸಹಿತ
ಸ್ತಮಿಸೆ, ಕಮಲಿನಿ ಕೌರವನ ಮುಖ
ಕಮಲ ಬಾಡಿತು, ತಿಮಿರ ಹೆಚ್ಚಿತು ಶೋಕತಮದೊಡನೆ
ಅಮಳ ಚಕ್ರಾಂಗಕ್ಕೆ ಭೂಪೋ
ತ್ತಮನ ವಿಜಯಾಂಗನೆಗೆಯಗಲಿಕೆ ಸಮನಿಸಿತು.

ಮೂರನ್ನು ಕುರಿತು ಟಿಪ್ಪಣಿ ಬರೆಯಿರಿ. **[3×5=15]**

ಪ್ರ3) ನಂಬಿಯಣ್ಣನ ಕಥಾನಕಗಳು

ಪ್ರ4) ಸಿದ್ಧರಾಮನ ಪವಾಡಗಳು

ಪ್ರ5) ಕುಮಾರವ್ಯಾಸನ ಕೃತಿಗಳು

ಪ್ರ6) ದುಷ್ಟ ಬುದ್ಧಿಯ ಪಾತ್ರ

ಪ್ರ7) ಮುಂಡಿಗೆಗಳು

ವಿಭಾಗ–ಬಿ

ಮೂರು ಪ್ರಶ್ನೆಗಳಿಗೆ ಉತ್ತರಿಸಿ. **[3×10=30]**

ಪ್ರ8) ಅಕ್ಕನ ಆತ್ಮನಿವೇದನೆಯ ಹಿನ್ನೆಲೆಯಲ್ಲಿ ಅನುಭಾವದ ನೆಲೆಯನ್ನು ಕುರಿತು–ವಿವೇಚಿಸಿ.

ಪ್ರ9) ನಂಬಿಯಣ್ಣನ ರಗಳೆಯಲ್ಲಿ ವೃದ್ಧವೇಷದ ಶಿವನ ಪಾತ್ರ ಹೇಗೆ ಚಿತ್ರಣಗೊಂಡಿದೆ? ಚರ್ಚಿಸಿ.

ಪ್ರ10)ಚಂದ್ರಹಾಸೋಪಖ್ಯಾನ ಕಥಾಭಾಗದ ವೈಶಿಷ್ಟ್ಯವನ್ನು ಕುರಿತು ವಿವರಿಸಿ.

ಪ್ರ11)ಕನಕದಾಸರ ಕೀರ್ತನೆಗಳಲ್ಲಿ ಸಮಾಜ ವಿಮರ್ಶೆ ಹೇಗೆ ವ್ಯಕ್ತವಾಗಿದೆ? ಚರ್ಚಿಸಿ.

ಪ್ರ12)ಭರತ–ಬಾಹುಬಲಿಯರ ಯುದ್ಧ ಸನ್ನಿವೇಶವು ಹೇಗೆ ಮೂಡಿಬಂದಿದೆ? ವಿಶ್ಲೇಷಿಸಿ.

ವಿಭಾಗ–ಸಿ

ಒಂದು ಪ್ರಶ್ನೆಗೆ ಉತ್ತರಿಸಿ. **[1×15=15]**

ಪ್ರ13)ಮಧ್ಯಕಾಲೀನ ಯುಗದ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಸ್ಥಿತ್ಯಂತರಗಳನ್ನು ಕುರಿತು ಚರ್ಚಿಸಿ.

ಪ್ರ14)ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಸಾಹಿತ್ಯ ಪ್ರಕಾರಗಳ ವೈಶಿಷ್ಟ್ಯತೆಯನ್ನು ಕುರಿತು ವಿಶ್ಲೇಷಿಸಿ.

ಒಂದು ಪ್ರಶ್ನೆಗೆ ಉತ್ತರಿಸಿ. **[1×15=15]**

ಪ್ರ15)ರಾಘವಾಂಕನ ಸಿದ್ಧರಾಮನ ಪಾತ್ರ ಲೌಕಿಕ ಮತ್ತು ಅಲೌಕಿಕ ನೆಲೆಯಲ್ಲಿ ಹೇಗೆ ಚಿತ್ರಣಗೊಂಡಿದೆ? ವಿವೇಚಿಸಿ.

ಪ್ರ16)ಕರ್ಣಾರ್ಜುನರ ಯುದ್ಧಪ್ರಸಂಗವು ಕುಮಾರವಾಸನಲ್ಲಿ ಹೇಗೆ ಮೂಡಿಬಂದಿದೆ? ವಿಶ್ಲೇಷಿಸಿ.